ತಾರೀಖು 15ನೆ ಜೂ॥ 1907.

ನಂ. ಫೈ 9255—ಜಿ. ಎಫ್. 4-06—8, ಅಸಿಸ್ಟೆಂಟ್ ಕಂಟ್ರೋಲರ್ ಮಿ॥ ಎಲ್. ಬಿಷ್ಟೋಪಂತ ಬಾದಾವಿಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 177ನೆ ಪ್ರಕರಣದ ವೇರೆಗೆ, 1907ನೆ ಇಸವಿಯ ಜೂ॥ 17ನೆ ತಾರೀಖಿನಿಂದ ಹದಿನೈದು ದಿವಸಗಳವರೆಗೆ ಪ್ರಿವಿಲೇಜ್ ರಜಾ ಕೊಟ್ಟಿದೆ.

ತಾರೀಖು 20ನೆ ಜೂ॥ 1907.

ನಂ. ರೆ. 10813—ಲ್ಯಾ. ರೆ. 494-06—4, ಶ್ರೀನಿವಾಸಪುರದ ತಾಲ್ಲೂಕಿನ ಅಮಲ್ದಾರ್ ಮಿ॥ ಎಸ್. ವೆಂಕಟರಮಣಶಾಸ್ತ್ರಿಯವರಿಗೆ 1907ನೆ ಇಸವಿಯ ಮಾರ್ಚಿ 30ನೆ ತಾರೀಖಿನ ರೆ. 8922—ಲ್ಯಾ. ರೆ. 494-06—2ನೆ ನಂಬರಿನ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟ ಎರಡು ತಿಂಗಳ ಪ್ರಿವಿಲೇಜ್ ರಜಾವಿನ ಜತೆಗೆ ಇನ್ನೂ ಹದಿನೈದು ದಿನಗಳ ರಜಾ ಕೊಟ್ಟಿದೆ.

2. ಆ ಇಸ್ತಿಹಾರ್ನಾಮೆಯಲ್ಲಿ ಹುಕುಂ ಮಾಡಿರುವಂತೆಯೇ ಬದಲಿ ಏರ್ಪಾಡು ಮುಂದೆಯೂ ನಡೆಯತಕ್ಕದ್ದು.

ಹುಕುಂ ಬಮೋಜೀಬ್,
ಸಿ. ಎಸ್. ಬ್ಯಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 20ನೆ ಜೂ॥ 1907.

ನಂ. 570—4506, ಅಸಿಸ್ಟೆಂಟು ಇಂಜಿನಿಯರ್ ಮೆ॥ ಕೆ. ಅನಂತಾಚಾರಿಯಾ, ಎಲ್. ಸಿ. ಇ., ಯವರನ್ನು ಮಾರಿಕಣಿವೆ ಡಿವೀಜನಿಂದ ಹಾಸನ ಡಿವೀಜನ್ನಿಗೆ ವರ್ಗ ಮಾಡಲ್ಪಟ್ಟಿದೆ.

ತಾರೀಖು 24ನೆ ಜೂ॥ 1907.

ನಂ. 581—4567, ಪ್ಯಾಲೆಸ್ ಡಿವೀಜ್ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ॥ ಬಿ. ಪಿ. ರಾಘವಲುನಾಯಿಡು ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ 177ನೆ ಆರ್ಟಿಕಲ್ ಅನುಸರಿಸಿ ಸಂ॥ 1907ನೆ ಜೂ॥ 24ನೆ ತಾರೀಖು ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯಿತು ಒಂದುವರೆ ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

2. ಎಗ್ಜಿಕ್ಯೂಟಿವ್ ಇಂಜಿನಿಯರ್ ಮೆ॥ ಸಿ. ಮಾಧವರಾವ್ ಯವರು, ಮೆ॥ ರಾಘವಲುನಾಯಿಡು ಯವರು ರಜಾದ ಮೇಲೆ ಇರುವ ಪರಿಯಂತರವೂ ಪ್ಯಾಲೆಸ್ ಡಿವೀಜ್ ಚಾರ್ಜಿನಲ್ಲಿ ಇರತಕ್ಕದ್ದು.

ಹುಕುಂ ಬಮೋಜೀಬ್,
ಬರ್ನಾರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿ.